"SATYAVADI" Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 18] ಬುಧವಾರ 3—10—45 [ಬಿಡಿ ಪ್ರತಿ 3 ಪೈ

ಹೆಸನು ಬಿಟನಿಗೆ ಹಿಟ್ಲರ್ ಕಳುಹಿಸಿದ್ದನೇ!!

ಬ್ರಿಟನ್ನಿಗೆ ಹೆಸ್ಸನ್ನು ಹಿಟ್ಲರೇ ಕಳುಹಿಸಿದ್ದೆಂದೂ, ಅವನು ಚರ್ಚಿಲ್ ಸರಕಾರವನ್ನು ಯುದ್ಧದಿಂದ ನಾಪಸ್ಸಾಗುವಂತೆ ಮಾಡಿ ಜರ್ಮನಿಯು ರಷ್ಯಾ ಮೇಲೆ ಮಾತ್ರ ಯುದ್ಧ ನಡೆಸಲು ಅನುಕೂಲಿಸಲು ಏರ್ಪಾಡು ಮಾಡಲು ಹೀಗೆ ಮಾಡಲಾಗಿದ್ದಿತೆಂದೂ ಕರ್ನಲ್ ಸರಕಾರಿ ಕಾಗದಪತ್ರಗಳು ತಿಳಿಸುತ್ತವೆ.

ಮದರಾಸಿನ ಲಕ್ಷ್ಮೀಕಾಂತಂ ಖುನಿ ಮೊಖದ್ದಮೆಯಲ್ಲಿ ತ್ಯಾಗರಾಜ ಭಾಗವತರ್ ಮುಂತಾದವರು ಮಾಡಿರುವ ಅಪೀಲು ಈ ದಿಂಗಳು ತಾ || 8 ರಲ್ಲಿ ಹೈ ಕೋರ್ಟಿನ ಇಬ್ಬರು ಜಡ್ಜರ ಮುಂದೆ ವಿಚಾರಣೆಗೆ ಬರುವುದು.

ವಾಷಿಂಗ್ಟನ್ ಆ 1— ಫ್ರೆಂಚ್ ಇಂಡೋಚೈನಾದಲ್ಲಿ ಜಪಾನರು ತಮ್ಮ ಶರಣಾಗತಕ್ಕೆ ಮುಂಚೆ, ಅನ್ನಮೈಟರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟಿದ್ದರೆಂದೂ ಅದರಿಂದ ಅಲ್ಲಿಯ ಅಂದೋಳನಕ್ಕೆ ಕಾರಣನೆಂದೂ ಇಲ್ಲಿಯ ಫ್ರೆಂಚ್ ರಾಯಭಾರಿಯ ಅಭಿಪ್ರಾಯವಾಗಿದೆ.

ಕೈಮಗ್ಗದ ಬಟ್ಟೆಯ ಕ್ರಯ ನಿಗದಿಯು ಇನ್ನು ಮುಂದಿಲ್ಲವೆಂದು ಮದರಾಸು ಸರಕಾರದ ಆಜ್ಞೆ. ಮಿಲ್ ಬಟ್ಟೆಗಳು ಹೆಚ್ಚಾಗಿ ದೊರೆಯುವದರಿಂದ ಕೈ ಮಗ್ಗದ ಬಟ್ಟೆ ದರ ಹೆಚ್ಚಾಗಿ ಹಾಕಿದರೆ ವ್ಯಾಪಾರ ತಾನೇ ಆಗುವುದಿಲ್ಲವೆನ್ನುವುದೇ ಇದಕ್ಕೆ ಕಾರಣ.



ಜಪಾನ್ ರಾಯಭಾರಿಯ ನಿವಾಸದಿಂದ ಹೀಗೆ ಕಾಣುತ್ತೆ

ಗಾಂಧೀಜೀ ಜಯುಂತ್ಯುತ್ಸವ

ನಾಳೆಯ ದಿವಸ ಸಂಜೆ ಮೈಸೂರು ಶ್ರೀ ಶಿವರಾತ್ರೀಶ್ವರ ವಿಶ್ರಾಂತಿಗೃಹದ ಸಂಘದಲ್ಲಿ ಪೂಜ್ಯ ಗಾಂಧೀಜೀ ವರ್ಧಂತ್ಯುತ್ಸವವು ಶ್ರೀಯುತ ಕೃಷ್ಣಾಬಾಯಿ ಸಹಾಜೀಕರ ಅಧ್ಯಕ್ಷತೆಯಲ್ಲಿ ನಡೆಯುವುದು ಸರ್ವರ ಆಗಮನವನ್ನೂ ಕೋರಲಾಗಿದೆ.

ದಂಡಯಾತ್ರೆ ಫಲವು ಏನಾಗಬಹುದಿದ್ದಿತೋ?

ಓರೋಹಿಟೋ ಹೇಳುವರು

ಜಪಾನ್ ದಂಡಯಾತ್ರೆ ಏನಾದರು ನಡೆದಿದ್ದರೆ ಜಪಾನ್ ಸಂಪೂರ್ಣವಾಗಿ ಹಾಳಾಗುತ್ತಿತ್ತು ಮಿತ್ರರಾಷ್ಟ್ರಗಳು ಜಪಾನಿನ ವಿಚಾರಗಳಲ್ಲಿ ಕೈಗೊಂಡಿರುವ ಉತ್ಯವನ್ನು ಸಂಪೂರ್ಣತೃಪ್ತಿಯನ್ನುಂಟುಮಾಡಿರುವುದು—ಹಿರೋಹಿಟೋ ಮೆಕಾರ್ಥರೊಡನೆ ನಡೆಸಿದ ಭೇಟಿಯಲ್ಲಿ ತಿಳಿಸಿದರು.

ಗಾಂಧೀಜೀ ವರ್ಧಂತಿ

ನಿನ್ನೆಯ ದಿವಸ ಮೈಸೂರಿನಲ್ಲಿರುವ ಬುಚನಯ್ಯನವರ ಹೈಸ್ಕೂಲ್‌ನಲ್ಲಿ ಗಾಂಧಿಜಯಂತಿ ವಿಶೇಷ ವಿಜೃಂಭಣೆಯಿಂದ ನಡೆಸುತ್ತ ಸೂಲುವ ಸ್ಪರ್ಧೆಯಲ್ಲಿ ಜಯಪಡೆದವರಿಗೆ ಮಿದ್ದರ್ ಸದಸ್ಯರ ಸಹಾಯ ಸಂಘದವರಿಂದ ಇಡಲ್ಪಟ್ಟಿದ್ದ ಬಹುಮಾನವನ್ನು ಹಂಚಲಾಯಿತು ಮಗ್ಗಲಾಲರು ಹಿಂದೀ ಭಾಷೆಯಲ್ಲಿ ಭಾಷಣವನ್ನು ಮಾಡಿದರು ಕನ್ನಡದಲ್ಲಿ ಆ ಭಾಷಣದ ತರ್ಜುಮೆ ಅನವಶ್ಯಕವೆಂದು ಕೆಂಗಸೊಬ್ಬಳು ಹೇಳಿದಳು ಎಂದು ಮಾತಂ ಗೀತೆಯೊಡನೆ ಸಭೆ ನಿಂತಿತು

ಪೂನಾ ರೈಲ್ವೆ ಪೋರ್ಟರುಗಳ ಮುಷ್ಕರ ಪ್ರಾರಂಭವಾಗಿದೆ

ಭಾರತದ ವಿಷಯದಲ್ಲಿ ಸಹಾನುಭೂತಿಯುಳ್ಳ ಅತಿಥಿಗಳೆಲ್ಲರೂ ಈ ದಿನ ಲಂಡನ್ನಲ್ಲಿ ಗಾಂಧೀ ಜಯಂತಿ ಸಂದರ್ಭದಲ್ಲಿ ಉಪನ್ಯಾಸ ಮಾಡುವರು.

ಸೈಗಾನ್ನಲ್ಲಿ ಅಶಾಂತಿಯು ಹೆಚ್ಚು ಕಾಣಿಸಿರುವುದರಿಂದ ಬ್ರಿಟೀಷ್ ಸೇನೆಗಳು ಬುಬುಸಿದಿವೆ.

ಜನೇ ಭಾ. ದಳದ ಪರಾಕ್ರಮದ ಚಿತ್ರ ಪ್ರದರ್ಶನ

ಲಂಡನ್ ಸೆ 28— ಜಪಾನಿಗಳ ಶರಣಾಗತಿಗೆ ನೆರವಾದ ಭಾರತ ಸೇನೆಯ ಸಾಹಸವನ್ನು ಇಂಗ್ಲೆಂಡಿನ ನೂರಾರು ಸಿನಿಮಾ ಮಂದಿರಗಳಲ್ಲಿ ತೋರಿಸುತ್ತಿದ್ದಾರೆ. ಸಿಂಗಪುರವು ವಿಶ್ವರ ಸಹವಾದ ಚಿತ್ರ ವಿಶದವಾಗಿ ಸ್ವಸಂಪೂರ್ಣವಾಗಿದೆ.

ಈ ವಿಜಯಕ್ಕೆ 5 ನೇ ಭಾ. ದಳವೇ ಮುಖ್ಯ ಕಾರಣ. ಇವು ಮೊದಲು ಮಲಯಾದಲ್ಲಿ ಕಾಲೂರಿದ್ದು ಶರಣಾಗತಿ ಪತ್ರಿಕೆಗೆ ರುಜು ಹಾಕಿಸುವಾಗ ಬ್ರಿಗೇಡಿಯರ್ ಕೆ ಎಸ್. ತಿಮ್ಮಯ್ಯನವರು ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್ನರ ಬಲಗಡೆ ನಿಂತಿದ್ದಾರೆ. 5 ನೇ ಭಾ. ದಳವು ಲಾರಿಗಳಲ್ಲಿ ಕುಳಿತು ಹೋಗುತ್ತಿರುವಾಗ ಬೀದಿಗಳಲ್ಲಿ ಜನ ಗುಂಪುಗುಂಪಾಗಿ ನಿಂತು ಜಯಘೋಷ ಮಾಡುವುದು ವಂತ್ತು ಮುಕ್ತರಾಜ ಯುದ್ಧ ಖೈದಿಗಳು ಭಾ. ಸೈನಿಕರಿಂದ ಆಹಾರ ಸಿಗರೇಟುಗಳನ್ನು ತೆಗೆದುಕೊಳ್ಳುತ್ತಿರುವುದು ಮುಂತಾದ ದೃಶ್ಯಗಳು ಚಿತ್ರವಾಗಿವೆ. [ಐ. ಪಿ.]

ಕಾಂಗ್ರೆಸ್ ಅಧ್ಯಕ್ಷತೆ

ಮುಂದಿನ ಕಾಂಗ್ರೆಸ್ ಅಧ್ಯಕ್ಷತೆಗೆ ಸರದಾರ ಪಟೇಲರ ಹೆಸರನ್ನು ಮಹಾತ್ಮರು ಸೂಚಿಸಿದ್ದರೂ ಅವರ ಪ್ರಕೃತಿ ಅಷ್ಟೊಂದು ನೆಟ್ಟಗಿಲ್ಲವಾದ್ದರಿಂದ ಮುಂದಿನ ಕಾಂಗ್ರೆಸ್ ಅಧ್ಯಕ್ಷತೆಗೆ ಶ್ರೀ ಶರತ್‌ಚಂದ್ರ ಬೋಸರನ್ನು ಆರಿಸುವ ಸಂಭವವಿದೆಯೆಂದು ಹೇಳಲಾಗಿದೆ.

From 3—10—45

AT Opera—

ZAMIN

ದುರ್ಗಾ ಕೋಟೆ, ಕುರ್ಚಿದ್, ನಾಜಿರ್ ಡೇವಿಡ್ ಪಾತ್ರವಹಿಸಿರುವ

ಜಮೀನ್

ಮುಂದಿನವಿಸ್ತೋದ —

ರಂಜನ್, ಟಿ ಆರ್, ರಾಜಕುಮಾರಿ ಕೆ. ಎಲ್. ವಿ ವಸಂತ, ಕೃಷ್ಣನ್, ವಜ್ರ ರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

ಬಾಪ್ಪುವಿನ ಹುಟ್ಟುವಿನ

.....

(ಮುಂದುವರಿದದ್ದು)

ಎಲ್ಲಾ ಮುಖಂಡರೂ ಬಿಡುಗಡೆ ಯಾದರು. ಅವು ಮುಂದೆ ಯೋಜನೆಯ — ಕಾರ್ಯದ ಬೆಟ್ಟವನ್ನೇ ತಂದಿಟ್ಟರು ಬಾಪೂ. ಎಲ್ಲರೂ ಸಮ್ಮಾದ ಸ್ವಾಗತವನ್ನು ಹೊಂದಿದರು ಆದರೆ 'ಜಗತ್ತಿನ ಮಹಾತ್ಮನಾಗಿ, ಅಖಿಲ ಆರ್ಯಾವೃತ್ತದ ದರಾದರನಾಗಿ' ಅಲ್ಲ ಅದೊಬ್ಬ ನಿಷ್ಪಕ್ಷ ನಿರೀಕ್ಷಕನಾಗಿ, ಆದರೂ ವೇವಲ್ಲರನ್ನು ಕಂಡರು. ಭಾರತ ಸ್ವಾತಂತ್ರ್ಯ. ಅವರ ಧ್ಯೇಯಗಳನ್ನು ಚರ್ಚಿಸಿದರು. 'ಸಂಘಟನೆಯೇ ನಮ್ಮ ಗುರಿ. ದೇಶವು ಸಿದ್ಧವಿದೆ' ಎಂದು ತನ್ನ ಮಂತ್ರ ಮುಗ್ಧಪಾತಕಗಳಿಂದ ಅವುಗಳನ್ನು ವಾದಿಸಿದರು. ಆದರೂ ಸಾಧಿಸಲಿಲ್ಲ. ಎಷ್ಟೊಂದು ದಿನದ ಪ್ರಯತ್ನ ? ಅದೆಂತಹ ಶ್ರಮ—ಸೋಲುಗಳ ತಾಂಡವ ? 'ಇಲ್ಲ, ನಾನು ನಿರಾಸೆ ಪಡಲಾರೆ, ನಾವು ಇನ್ನೂ ದುಡಿಯಬೇಕಿದೆ' ಎಂದು ಹೊರಟರು ಅವರು ಸಿಮ್ಲಾದಿಂದ ಅವರು ಅಷ್ಟೊಂದು ಶಾಂತಿಯ ಪ್ರವಾದಿಗಳು. ಭಾರತವು ಅವರಿಗೆ ಎಂದೆಂದಿಗೂ ಚಿರಋಣಿಯಾಗಿರುವುದು!

ಸೇವಾಗ್ರಾಮದ ಧ್ರುವತಾರೆಯನ್ನು ಆರಸುತ್ತಾ, ಮುಖಂಡರು ಬಂದರು. ಬಾಪೂ ಇನ್ನೂ ಒಂದರಮೇಲೊಂದಾಗಿ ಘಟಿಸಿದುದನ್ನು ಮರೆದಿಲ್ಲ ! ಆ ಜೀಸರ ವಿಷಾಧದ ರೇಖೆ ಇನ್ನೂ ಅವರಿಂದ ತೊಲಗಿಲ್ಲ ಮುಂದಣ ಹೆಜ್ಜೆಯ ಮುಂಭಾದಲ್ಲಿ ಅವರು ತಲ್ಲೀನರಾಗುತ್ತಿರುವರು

ಬಾಪುವಿನ ನಾಲ್ಕನೆತ್ತು ಭಾರತದ ರಾಷ್ಟ್ರಭಾಕ್ತರು ನೆರೆಯುತ್ತಿರುವರು. ಮೊನ್ನೆ ಮೊನ್ನೆಯೇ ಅವರು ಜಪಾನಿನ ರಂಗಕ್ಕಾಗಿ ಭಾರತವನ್ನು ಸಿದ್ಧಗೊಳಿಸುವ ಘೋಷಣೆಯನ್ನು ಹೊರಡಿಸಿರುವರು !

ಬಾಪೂ ಅವರೆಂತಹ ವ್ಯಕ್ತಿ ಪುರುಷ ಕರ್ಮವೀರರು ! ಅವರು ಜಗತ್ತಿನ ರತ್ನವೊಂದು ; ಭಾರತದ ದಿವ್ಯಜ್ಯೋತಿ ! ತನ್ನದಿಲ್ಲವನನ್ನೂ ಭಾರತಾಂಬೆಯ ಉಡಿಯಲ್ಲಿ ಹಾಕಿ ನಿಂದಿರುವ ಮಹಾಪುರುಷರವರು ! ಅವರ ದಿನವು ನನ್ನ ಹಬ್ಬದ ದಿನ—ಗೆಲುವಿನ ದಿನ !

(ಮುಂದುವರಿಯುವುದು)

At Ranjit
Humayun
4 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನಗೀಸ್,, ಷಾ ನವಾಸ್
ಪಾತ್ರ ವಹಿಸಿರುವರು

For Good Printing
L. N. Press
Sriramp et MYSORE

ಅರ್ಥ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು,
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore



ಐ. ಜೆ. ಹಾಲ್
ರವೇ ಪೀದಿ — ಮೈಸೂರು

ಯುದ್ಧದಲ್ಲಿ ಜಯದೊರೆತ್ತಿದ್ದಕ್ಕೆ ಸಂತೋಷ

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನ್ನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಟ್ಟು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲ್ಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೂಜಾ ಪರಿಯೂದುದು. ವಿವರಗಳಿಗೆ ಪುಟ್ಟು ಕ್ಯಾಟಲಾಗ್ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಪುಟ್ಟು ಕಿರಾಣ ವ್ಯಾಪಾರಿಗಳು)
ಬಿ. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮಾಡರಾಸು.

ರಾಜಕೀಯ ಖೈದಿಗಳಿಂದರೆ ನರಕಕ್ಕೆ ಹೋಗುವ ಪಾಪಿಗಳೇ?

ಅಲಹಾಬಾದ್, ಸೆ 29

ಕಾಶೀನಗರದಲ್ಲಿ ರಾಜಕೀಯ ಖೈದಿಗಳ ಮೇಲೆ ಅತ್ಯಾಚಾರ ನಡೆಸಿದ್ದು ಈಗ ತಿಳಿದುಬಂದಿದೆ.

ರಾಜಕೀಯ ಖೈದಿಗಳ ಕೈಗಳಿಗೆ ಕೋಳಗಳನ್ನು ತೊಡಿಸಿ, ಕಾಲುಗಳನ್ನು ಬಂಧಿಸಿ ಬಂದು ಮೈಲಿ ದೂರದಲ್ಲಿದ್ದ ನ್ಯಾಯಾಸ್ಥಾನಕ್ಕೆ ಎಳೆದುಕೊಂಡು ಹೋದರು ಬಂದು ಮೈಲಿಯವರೆಗೆ ನಡೆಯುವುದು ತಮಗಸಾಧ್ಯವೆಂದು ಪೊಲಿಸಧಿಕಾರಿಗಳಿಗೆ ರಾಜಕೀಯ ಖೈದಿಗಳು ಉತ್ತರವಿತ್ತಿದ್ದರು. ನ್ಯಾಯಾಸ್ಥಾನವನ್ನು ತಲುವ ವೇಳೆಗೆ ಆ ರಾಜಕೀಯ ಖೈದಿಗಳ ಚರ್ಮವು ಸುಲಿಯಲ್ಪಟ್ಟ ನೆತ್ತರು ಹರಿಯುತ್ತಿದ್ದಿತು. ಈ ಅನಾಗರೀಕ ಕೃತ್ಯದ ವಾರ್ತೆಯು ಪಂ || ನೆಹರೂರವರ ಗಮನವನ್ನು ಎಳೆಯುವಂತೆ ಮಾಡಿತು.

ಪಂ || ನೆಹರು ಹೇಳಿಕೆಯೊಂದನ್ನು ಹೊರಡಿಸುತ್ತಾ " ಇದು ನಂಬಲನರ್ಹವಾದ ಕೆಟ್ಟ ಸುದ್ದಿ. ಆದರೆ ಸತ್ಯಾಂಶಕ್ಕೂ ಸ್ಪಸಿದ್ಧ ಕಾಶೀನಗರದಲ್ಲಿ ಈ ದುಷ್ಕೃತ್ಯ ನಡೆದಿದೆ. ವಕೀಲ ಸಂಘ ಪೋಲಿಸು ಅಕ್ಕನು ವರ್ತನೆಯನ್ನು ತೀವ್ರವಾಗಿ ಖಂಡಿಸಿದೆ. ಜೆಲ್ಲ್ ಶಿಬಿರದ ನೆನೆಪು ಈ ದುಷ್ಕೃತ್ಯ ತರುವುದು. ವ್ಯಸನಪೂರಿತವಾದ ಈ ಕೃತ್ಯವನ್ನು ಅರಿತಿದ್ದಾಗ್ಯೂ, ಅಲ್ಲಿಯ ಪ್ರಜೆಗಳು ತಂಪಾಗಿದ್ದುದು ಆಶ್ಚರ್ಯ! ಇದು ನಮ್ಮೆಲ್ಲರ ರಕ್ತವನ್ನು ಕುದಿಸಿದೆ; ಹುಚ್ಚರನಾಗಿ ಮಾಡಿದೆ; ಪ್ರತಿಕಾರ ಕೈಗೊಳ್ಳಲು ಬೋಧಿಸುತ್ತದೆ. ಟ್ವೀಸ್‌ಡೇಲ್ ಎಂಬ ಪೋಲಿಸ್ ಇಕ್ ಸ್ಪೆಕ್ಟರ್ ಈ ಕೃತ್ಯಕ್ಕೆ ವಶಾಲನೆಂದು ವಂದಿಯಾಗಿದೆ. ಇಂಥಹ ದುರಂತಸ್ಪೋರಕ ವ್ಯಕ್ತಿಯ ವಿಚಾರಣೆ ಬಹಿರಂಗವಾಗಿ ಏರ್ಪಟ್ಟು, ಸಭ್ಯ ಶಿಕ್ಷೆಯನ್ನು ವಿಧಿಸಬೇಕು " ಎಂದಿರುವರು.

ಅಕ್ಕರ ಸಾಮಾಜಿಕ —

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

☞ EVENING SHOWS

From 26-9-45

AT Opera—

Ali Baba & Forty Thieves

(in Technicolor)

Featuring—

MARIA MONTEZ
JON HALL
TURHAN BEY

Daily 3 Shows

At Ranjit

Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್
ನೀನಾ, ನರ್ಗಿಸ್, ಷಾ ನವಾಸ್
ಪಾತ್ರವಹಿಸಿರುವರು

For Good Printing

L. N. Press

Sriramp st MYSORE



ಐ. ಜೆ. ಹಾಲ್

ಕಾವೇ ಬೀದಿ — ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ; ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಔನ್ಸ್ ಸೀಸೆಕಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಣಿಕೆಪುಡಿ ಒಂದು ವೈಶಿಷ್ಟ್ಯ

ನಮ್ಮ ಶ್ರೀ ಓಂ ಗುಂಡಿನ ಕೇಸರಿ ಅತ್ಯಂತ ಪರಿಶುದ್ಧವಾದ ಔಷಧಿಯಾದುದು. ವಿವರಗಳಿಗೆ ಮತ್ತು ಸ್ಟಾಂಪಿಲೆಗ್ಗೆ ಬರೆಯಿರಿ —

ವಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗಳಿ. ಗೋವಿಂದಪ್ಪ ನಾಯಕ ರಸ್ತೆ, ಜೆ. ಟಿ. ಮುದರಾಸು.

ರಷ್ಯಾದ ಪೆಟ್ರೋಲ್ ಸ್ಟೈಸಿಕರು